(ಕರ್ನಾಟಕ ಸರ್ಕಾರ
ಕಂದಾಯ ಇಲಾಖೆ)

**ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮಂಡ್ಯ ಜಿಲ್ಲೆ, ಮಂಡ್ಯ**

Phone no: 08232 224600
& Fax no:-08232-221417
E-mail:-dcmandya09@gmail.com

ಸಂ: ಸಿಬ್ಬಂದಿ (1)248/2016-17

ದಿನಾಂಕ: 20/09/2017

**-:ತಿಳುವಳಿಕೆ ಪತ್ರ:-**

**ವಿಷಯ:-** ಮಂಡ್ಯ ಜಿಲ್ಲಾ ಕಂದಾಯ ಘಟಕದಲ್ಲಿ ಖಾಲಿ ಇರುವ 100 ಗ್ರಾಮಲೆಕ್ಕಿಗರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಸಂಬಂಧದಲ್ಲಿ ಅಭ್ಯರ್ಥಿಗಳ ಮೂಲ ದಾಖಲೆಗಳನ್ನು ಹಾಜರುಪಡಿಸಲು ತಿಳಿಸುವ ಕುರಿತು.

**ಉಲ್ಲೇಖ:-** ಈ ಕಛೇರಿಯ ಅಧಿಸೂಚನೆ ದಿನಾಂಕ:ಸಿಬ್ಬಂದಿ(1) 248/2016-17, ದಿನಾಂಕ:20.03.2017.

@@@@@@

ಮಂಡ್ಯ ಜಿಲ್ಲಾ ಕಂದಾಯ ಘಟಕದಲ್ಲಿ ಖಾಲಿ ಇರುವ 100 ಗ್ರಾಮಲೆಕ್ಕಿಗರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಸಂಬಂಧದಲ್ಲಿ 1:5ರ ಅನುಪಾತದ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

ಸದರಿ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಸಾಮಾನ್ಯ ವರ್ಗದಡಿ ಆಯ್ಕೆಯಾದ ಅಭ್ಯರ್ಥಿಗಳಿಗೆ ದಿನಾಂಕ:09.10.2017ರಂದು ಹಾಗೂ ಮೀಸಲಾತಿಯನ್ವಯ ಇತರೆ ವರ್ಗದಡಿ ಆಯ್ಕೆಯಾದ ಅಭ್ಯರ್ಥಿಗಳಿಗೆ ದಿನಾಂಕ:10.10.2017ರಂದು ಮೂಲ ದಾಖಲೆ ಪರಿಶೀಲನೆಗೆ ದಿನಾಂಕವನ್ನು ನಿಗಧಿಪಡಿಸಲಾಗಿದೆ.

ನೀವು ಮೇಲ್ಕಂಡ ದಿನಾಂಕದಂದು ಈ ಕೆಳಕಂಡ ಮೂಲ ದಾಖಲೆಗಳನ್ನು ತಪ್ಪದೇ ಮಂಡ್ಯ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಪರಿಶೀಲನಾ ತಂಡಕ್ಕೆ ಹಾಜರುಪಡಿತಕ್ಕದ್ದು.

ಸಾಮಾನ್ಯ ವರ್ಗದಡಿ ಆಯ್ಕೆಯಾದ ಅಭ್ಯರ್ಥಿಗಳು ದಿನಾಂಕ:09.10.2017ರಂದು ಪರಿಶೀಲನೆಗೆ ಹಾಜರಾಗುವುದು. ಅದೇ ಅಭ್ಯರ್ಥಿಯು ಮೀಸಲಾತಿಯನ್ವಯ ಇತರೆ ವರ್ಗದಡಿ ಆಯ್ಕೆಯಾಗಿದ್ದಲ್ಲಿ ದಿನಾಂಕ:10.10.2017ರಂದು ಹಾಜರಾಗುವ ಅವಶ್ಯಕತೆ ಇರುವುದಿಲ್ಲ.

**ಹಾಜರುಪಡಿಸಬೇಕಿರುವ ಮೂಲ ದಾಖಲೆಗಳ ವಿವರಗಳು:-**

1. ಪಿ.ಯು.ಸಿ ಮೂಲ ಅಂಕಪಟ್ಟಿ/ ಕಂಪ್ಯೂಟರ್ ಜ್ಞಾನದ ಬಗ್ಗೆ ಪ್ರಮಾಣ ಪತ್ರದ ದಾಖಲೆ
2. ಜನ್ಮ ದಿನಾಂಕಕ್ಕೆ ಆಧಾರವಾಗಿ ಎಸ್.ಎಸ್.ಎಲ್.ಸಿ ಮೂಲ ಅಂಕಪಟ್ಟಿ ಅಥವಾ ತತ್ಸಮಾನ ಪರೀಕ್ಷೆಯ ಪ್ರಮಾಣ ಪತ್ರ/ವರ್ಗಾವಣೆ ಪ್ರಮಾಣ ಪತ್ರ.
3. ಮಾಜಿ ಸೈನಿಕ ಮೀಸಲಾತಿಯಡಿ ಮೀಸಲಾತಿ ಕೋರಿದ್ದಲ್ಲಿ, ಸೈನಿಕ ಸೇವೆಯಿಂದ ಬಿಡುಗಡೆಯಾದ/ಮುಕ್ತಿ ಹೊಂದಿದ ಬಗ್ಗೆ ಪ್ರಮಾಣ ಪತ್ರ
4. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಪ್ರವರ್ಗ-1, ಪ್ರವರ್ಗ-2ಎ, ಪ್ರವರ್ಗ-2ಎ, ಪ್ರವರ್ಗ-2ಬಿ,ಪ್ರವರ್ಗ-3ಎ,3ಬಿ ಗಳಡಿ ಮೀಸಲಾತಿ ಕೋರಿದ್ದಲ್ಲಿ , ಜಾತಿ ದೃಢೀಕರಣ ಪ್ರಮಾಣ ಪತ್ರ
5. ಗ್ರಾಮೀಣ ಮೀಸಲಾತಿಯಡಿ ಮೀಸಲಾತಿ ಕೋರಿದ್ದಲ್ಲಿ, ನಮೂನೆ-1 ಮತ್ತು 2 ಪ್ರಮಾಣ ಪತ್ರ

-2)

6. ಕನ್ನಡ ಮಾಧ್ಯಮ ವ್ಯಾಸಂಗದಡಿ ಮೀಸಲಾತಿ ಕೋರಿದ್ದಲ್ಲಿ, ಕನ್ನಡ ಮಾದ್ಯಮ ವ್ಯಾಸಂಗ ಪ್ರಮಾಣ ಪತ್ರ
7. ಅಂಗವಿಲಕ ಮೀಸಲಾತಿಯಡಿ ಮೀಸಲಾತಿ ಕೋರಿದ್ದಲ್ಲಿ, ಅಂಗವಿಕಲ ಪ್ರಮಾಣ ಪತ್ರ
8. ಯೋಜನಾ ನಿರಾಶ್ರಿತ ಮೀಸಲಾತಿಯಡಿ ಮೀಸಲಾತಿ ಕೋರಿದ್ದಲ್ಲಿ, ಯೋಜನಾ ನಿರಾಶ್ರಿತ ಪ್ರಮಾಣ ಪತ್ರ
9. ವಿಧವೆ ಮೀಸಲಾತಿಯಡಿ ಮೀಸಲಾತಿ ಕೋರಿದ್ದಲ್ಲಿ, ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರ
10. ಶುಲ್ಕ ಪಾವತಿಸಿರುವ ಬಗ್ಗೆ ರಶೀದಿಯನ್ನು ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು.

ಸೂಚನೆಗಳು:-

1. ಮೀಸಲಾತಿಯಡಿ ನೇಮಕಾತಿ ಕೋರಿರುವ ಅಭ್ಯರ್ಥಿಗಳು ಸಂಬಂಧಿಸಿದ ಮೀಸಲಾತಿ ಮೂಲ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು, ಇಲ್ಲವಾದಲ್ಲಿ ನೇಮಕಾತಿ ಪ್ರಕ್ರಿಯೆಯಿಂದ ಕೈ ಬಿಡಲಾಗುವುದು.
2. ಅಭ್ಯರ್ಥಿಗಳು ಪರಿಶೀಲನೆಗೆ ಹಾಜರುಪಡಿಸಿದ ಮೂಲ ದಾಖಲೆಗಳ ದೃಢೀಕೃತ ಜೆರಾಕ್ಸ್ ಪ್ರತಿಯ ಒಂದು ಸೆಟ್‌ನ್ನು ಪರಿಶೀಲನಾ ತಂಡಕ್ಕೆ ತಪ್ಪದೇ ಸಲ್ಲಿಸುವುದು.

ಅಪರ ಜಿಲ್ಲಾಧಿಕಾರಿ,
ಮಂಡ್ಯ ಜಿಲ್ಲೆ,ಮಂಡ್ಯ.

ಇವರಿಗೆ,